

# ಅಧ್ಯಾಯ–I

## ಪೀಠಿಕೆ

## ಅಧ್ಯಾಯ–1

### ಪೀಠಿಕೆ

**1.1** ನಾವು ಕಾಣುತ್ತಿರುವ ಪ್ರಾಚೀನ ಸ್ಮಾರಕಗಳು ಪ್ರಸ್ತುತ ಆನಂದಿಸುವ ಸಲುವಾಗಿ ಹಾಗೂ ಅವುಗಳನ್ನು ಸಂರಂಕ್ಷಿಸಿ ಮುಂದಿನ ತಲೆಮಾರುಗಳಿಗೆ ಬಿಟ್ಟುಹೋಗುವುದಕ್ಕಾಗಿ ನಮ್ಮ ಹಿಂದಿನ ತಲೆಮಾರಿನವರು ಬಿಟ್ಟುಹೋಗಿರುವಂತಹವುಗಳಾಗಿರುವವು. ಪುರಾತತ್ವ ಸ್ಮಾರಕಗಳು ಐತಿಹಾಸಿಕ ನಿವೇಶನಗಳು, ಕಟ್ಟಡಗಳು, ಸ್ಮಾರಕಗಳು, ವಸ್ತು ಸಂಗ್ರಹಾಲಯಗಳಲ್ಲಿನ ಅತ್ಯಮೂಲ್ಯ ವಸ್ತುಗಳು, ಪ್ರಾಚೀನ ಹಸ್ತಕೃತಿಗಳು ಹಾಗೂ ಪ್ರಾಚೀನ ಅವಶೇಷಗಳನ್ನು ಒಳಗೊಂಡಿರುತ್ತವೆ. ಸ್ಮಾರಕಗಳು ಮತ್ತು ಸಂರಕ್ಷಣೆಗಳು ಸಾಂಸ್ಕೃತಿಕ ಗುರುತಿಸುವಿಕೆಯಲ್ಲಿ ಹಾಗೂ ಇತಿಹಾಸದ ಸಂರಕ್ಷಣೆಗಾಗಿ ಪ್ರಮುಖ ವಿಷಯಗಳಾಗಿರುತ್ತವೆ. ಐತಿಹಾಸಿಕ ಮತ್ತು ಪುರಾತತ್ವಶಾಸ್ತ್ರೀಯ ಪ್ರಾಮುಖ್ಯತೆಗಳೊಂದಿಗಿನ ಸ್ಮಾರಕಗಳನ್ನು ಒಂದು ಬಲಿಷ್ಠವಾದಂತಹ ಪ್ರಜ್ಞೆಯನ್ನು ರೂಪಿಸುವ ಸಲುವಾಗಿ ಅತ್ಯಂತ ಜಾಗರೂಕತೆಯಿಂದ ಸಂರಕ್ಷಿಸತಕ್ಕದ್ದು.

ಪುರಾತತ್ವ ನಿವೇಶನಗಳು ದೀರ್ಘ ಕಾಲದಿಂದ ಸ್ಮಾರಕಗಳ ಭಾಗವಾಗಿರುತ್ತವೆ ಹಾಗೂ ಅವುಗಳ ಪ್ರದರ್ಶನವು ಗಮನಾರ್ಹ ಪ್ರವಾಸೋದ್ಯಮವನ್ನು ಆಕರ್ಷಿಸುತ್ತದೆ. ಹೆಸರಾಂತ ರಾಜಮನೆತನಗಳು ತಮ್ಮ ಅಳಿಸಲಾಗದ ಗುರುತುಗಳನ್ನು ವಾಸ್ತುಶಿಲ್ಪಗಳ ಮೂಲಕ ಬಿಟ್ಟುಹೋಗಿರುವರಾದ್ದರಿಂದ ಕರ್ನಾಟಕ ರಾಜ್ಯವು ಒಂದು ಸಂಪದ್ಭರಿತ ಹಾಗೂ ವೈವಿಧ್ಯತೆಯಿಂದ ಕೂಡಿದಂತಹ ಸ್ಮಾರಕಗಳನ್ನು ಹೊಂದಿರುವುದು. ಈ ರೀತಿಯಾಗಿ ಐತಿಹಾಸಿಕ ಸ್ಮಾರಕಗಳು ಮತ್ತು ಪ್ರಾಚೀನಾವಶೇಷಗಳ ಸಂರಕ್ಷಣೆ ಹಾಗೂ ಸುರಕ್ಷತೆಯು ಅತ್ಯಂತ ಪ್ರಮುಖ ವಿಷಯವಾಗಿರುತ್ತದೆ.



**ಛಾಯಾಚಿತ್ರ ಸಂಖ್ಯೆ 1.1: ಮೈಸೂರು ಅರಮನೆ, ಮೈಸೂರು**

ಉತ್ತರ ಮತ್ತು ಕೇಂದ್ರ ಕರ್ನಾಟಕದ ಕೆಲವು ಭಾಗಗಳು ನಂದರು ಮತ್ತು ಮೌರ್ಯರ ಆಳ್ವಿಕೆಯ ಅಡಿಯಲ್ಲಿದ್ದವು (ಕ್ರಿಸ್ತಪೂರ್ವ ನಾಲ್ಕನೇ ಮತ್ತು ಮೂರನೇ ಶತಮಾನ). ಕರ್ನಾಟಕದಲ್ಲಿ ಈವರೆವಿಗೆ ಅಶೋಕನ 14 ಶಿಲಾಶಾಸನಗಳು (ರಾಕ್ ಎಡಿಕ್ಟ್ಸ್) ಕಂಡುಬಂದಿರುತ್ತವೆ. ಹಾಗೂ ಅವುಗಳ ಪೈಕಿ 13ನೇ ಮತ್ತು 14ನೇ ಶಾಸನಗಳು ಕಲಬುರಗಿ ಜಿಲ್ಲೆಯ ಸನ್ನತಿಯಲ್ಲಿ ಕಂಡುಬಂದಿರುವವು. ಮೇಲಿನ ಶಾಸನಗಳಲ್ಲಿ ಉಪಯೋಗಿಸಲಾಗಿರುವ ಭಾಷೆಯು ಪ್ರಾಕೃತಿಯಲ್ಲಿ ಆಗಿರುವುದು ಹಾಗೂ ಬರವಣಿಗೆಯಾಗಿ ಉಪಯೋಗಿಸಲಾಗಿರುವ ಲಿಪಿಯು ಬ್ರಾಹ್ಮಿಯಲ್ಲಿರುವುದು. ಬನವಾಸಿಯ ಕದಂಬರು, ತಲಕಾಡಿನ ಗಂಗರು, ಬಾದಾಮಿ ಮತ್ತು ಕಲ್ಯಾಣದ ಚಾಲುಕ್ಯರು, ದ್ವಾರಸಮುದ್ರದ ಹೊಯ್ಸಳರು, ವಿಜಯನಗರ ಸಾಮ್ರಾಟರು ಹಾಗೂ ಮೈಸೂರಿನ ಒಡೆಯರು ರಾಜ್ಯದ ಸಂಪದ್ಭರಿತ ಸಾಂಸ್ಕೃತಿಕ ಸ್ಮಾರಕಗಳಿಗೆ ಸಾಕ್ಷ್ಯಾಧಾರವಾಗಿರುತ್ತಾರೆ.

ಕರ್ನಾಟಕದ ವೈವಿಧ್ಯತೆಯಿಂದ ಕೂಡಿದಂತಹ ಪುರಾತತ್ವ ವಾಸ್ತುಶಿಲ್ಪ ಸಂಪನ್ಮೂಲಗಳು ಅನೇಕ ಸಂಖ್ಯೆಗಳ ದೇವಸ್ಥಾನಗಳು, ಕೋಟೆಗಳು, ಸ್ಥೂಪಗಳು, ಅರಮನೆಗಳು, ಬಂಡೆಗಳು, ಕಲ್ಲುಗಳು, ಗೋಡೆಗಳು ಇತ್ಯಾದಿಗಳ ಮೇಲೆ ಕೆತ್ತನೆ ಮಾಡಿರುವಂತಹ ವಿವಿಧ ಶಾಸನಗಳೊಂದಿಗೆ (ಇನ್‌ಸ್ಕ್ರಿಪ್ಷನ್ಸ್) ಒಳಗೊಂಡಿರುವುದು. ಕೆಳಗಿನ ಭಾಗವು ಕರ್ನಾಟಕದ ಶ್ರೀಮಂತ ಪರಂಪರೆಯನ್ನು ಪರಿಚಯಿಸುತ್ತದೆ, ಇದು ಲೆಕ್ಕಪರಿಶೋಧನೆಯ ಅವಲೋಕನಗಳನ್ನು ಒಳಗೊಂಡಿರುವ ನಂತರದ ಅಧ್ಯಾಯಗಳನ್ನು ಶ್ಲಾಘಿಸಲು ಉಪಯುಕ್ತವಾಗಿದೆ. ಈ ನಿವೇಶನಗಳನ್ನು ಭಾರತೀಯ ಪುರಾತತ್ವಶಾಸ್ತ್ರ ಸಮೀಕ್ಷಾ ಸಂಸ್ಥೆ (ಆರ್ಕಿಯಲಾಜಿಕಲ್ ಸರ್ವೆ ಆಫ್ ಇಂಡಿಯಾ) ಅಥವಾ ಪುರಾತತ್ವಶಾಸ್ತ್ರ, ವಸ್ತುಸಂಗ್ರಹಾಲಯಗಳು ಮತ್ತು ಸ್ಮಾರಕಗಳ ಇಲಾಖೆ (ಡಿಪಾರ್ಟಮೆಂಟ್ ಆಫ್ ಆರ್ಕಿಯಲಾಜಿ, ಮ್ಯೂಸಿಯಂ ಅಂಡ್ ಹೆರಿಟೇಜ್), ಕರ್ನಾಟಕ ಸರ್ಕಾರ ಇವುಗಳಿಂದ ನಿರ್ವಹಿಸಲ್ಪಡುತ್ತವೆ.

***ಇತಿಹಾಸ–ಪೂರ್ವ ನಿವೇಶನಗಳು:*** ಇವುಗಳು ಕೃಷ್ಣಾ, ಭೀಮಾ, ಮಲಪ್ರಭಾ, ಘಟಪ್ರಭಾ, ಕಾವೇರಿ, ಹೇಮಾವತಿ, ಶಿಂಷಾ, ತುಂಗಭದ್ರಾ, ಮಂಜ್ರಾ, ಪೆನ್ನಾರ್, ನೇತ್ರಾವತಿ ಹಾಗೂ ಅವುಗಳ ಉಪನದಿಗಳ ಕಣಿವೆಗಳಲ್ಲಿ ಹರಡಿರುತ್ತವೆ. ಭಾರತದಲ್ಲಿ ಇತಿಹಾಸ–ಪೂರ್ವ ಅಧ್ಯಯನಗಳು ತದನಂತರದಲ್ಲಿ ಮದ್ರಾಸು ಪ್ರೆಸಿಡೆನ್ಸಿಯ ಒಂದು ಭಾಗವಾಗಿ ರೂಪಿತವಾದಂತಹ ಬಳ್ಳಾರಿ ಪ್ರಾಂತ್ಯದಲ್ಲಿ ಓರ್ವ ಬ್ರಿಟಿಷ್ ಅಧಿಕಾರಿ ಕ್ಯು ಬೋಲ್ಡ್ ಇವರಿಂದ 1836ರಲ್ಲಿ ಕುಪ್ಪಗಲ್ಲು ಮತ್ತು ಕುಡತಿನಿಯಲ್ಲಿ ಬೂದಿ ರಾಶಿಗಳನ್ನು ಸಂಶೋಧಿಸುವುದರೊಂದಿಗೆ ಪ್ರಾರಂಭಗೊಂಡಿತು. ತದನಂತರದ ಸಂಶೋಧನೆಗಳು ಕರ್ನಾಟಕದಲ್ಲಿ ಬಹಳಷ್ಟು ಸಂಖ್ಯೆಯ ಇತಿಹಾಸ–ಪೂರ್ವ ನಿವೇಶನಗಳೊಂದಿಗೆ ಶಿಲಾಯುಗ ಸಂಸ್ಕೃತಿಯು ಇದ್ದುದನ್ನು ಬಹಿರಂಗಪಡಿಸಿದವು. ಕರ್ನಾಟಕದಲ್ಲಿ ಪ್ರಾಚೀನ ಕಾಲದಲ್ಲಿ ನೆಲೆಸಿದ್ದವರು ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ ಹಲ್ಲೂರಿನಲ್ಲಿ ಕಂಡುಬಂದಿರುವಂತೆ ಸುಮಾರು ಕ್ರಿಸ್ತಪೂರ್ವ 1500ರಷ್ಟು ಮುಂಚಿನ ದಿನಗಳಲ್ಲಿ ಕಬ್ಬಿಣದ ಆಯುಧಗಳು ಮತ್ತು ಸಾಧನಗಳಿಂದ ಕಂಡುಬರುವಂತೆ ಉತ್ತರ ಭಾರತದ ಜನತೆಗಿಂತಲೂ ಮುಂಚಿತವಾಗಿ ಕಬ್ಬಿಣದ ಉಪಯೋಗವನ್ನು ಅರಿತಿದ್ದರು.

***ಬಾದಾಮಿಯ ಗುಹಾಂತರ ದೇವಾಲಯಗಳು:*** ಬಾದಾಮಿಯ ಗುಹಾಂತರ ದೇವಾಲಯಗಳು ಹಿಂದೂ ಮತ್ತು ಜೈನ ದೇವಾಲಯಗಳ ಒಂದು ಗುಂಪಾಗಿದ್ದು ಕರ್ನಾಟಕದ ಉತ್ತರ ಭಾಗದಲ್ಲಿನ ಬಾಗಲಕೋಟೆ ಜಿಲ್ಲೆಯಲ್ಲಿ ಒಂದು ಸಣ್ಣ ಪಟ್ಟಣ ಬಾದಾಮಿಯಲ್ಲಿ ಇರುತ್ತವೆ. ಈ ಗುಹೆಗಳು ಅದರಲ್ಲೂ ವಿಶೇಷವಾಗಿ ಬಾದಾಮಿ ಚಾಲುಕ್ಯ ವಾಸ್ತುಶಿಲ್ಪ ಹಾಗೂ ಅದಕ್ಕೂ ಮುಂಚಿನ 6ನೇ ಶತಮಾನದ ಗುಹೆಗಳು ಭಾರತೀಯ ಬಂಡೆಕೆತ್ತನೆ ವಾಸ್ತುಶಿಲ್ಪಕ್ಕೆ ಪ್ರಮುಖ ಉದಾಹರಣೆಗಳಾಗಿರುತ್ತವೆ.

***ಹಂಪಿ ಸ್ಮಾರಕಗಳು***: ಹಂಪಿಯು ಒಂದು ಯೂನೆಸ್ಕೋ ವಿಶ್ವ ಪಾರಂಪರಿಕ ನಿವೇಶನವಾಗಿದ್ದು, ಕರ್ನಾಟಕದ ಪೂರ್ವಕೇಂದ್ರ ಭಾಗದಲ್ಲಿ ವಿಜಯನಗರ ಜಿಲ್ಲೆಯಲ್ಲಿದೆ. ಹಂಪಿಯ ಪಳೆಯುಳಿಕೆಗಳು 4,100 ಹೆಕ್ಟೇರುಗಳಲ್ಲಿ ಹರಡಿರುತ್ತವೆ ಹಾಗೂ ಯುನೆಸ್ಕೋ ಅವುಗಳನ್ನು "ಕೋಟೆಗಳು, ನದಿ ತೀರದ ವೈಲಕ್ಷಣಗಳು, ರಾಜಮನೆತನದ ಮತ್ತು ಪವಿತ್ರ ಕಟ್ಟಡ ಸಂಕೀರ್ಣಗಳು, ದೇವಸ್ಥಾನಗಳು, ಪುಣ್ಯ ಕ್ಷೇತ್ರಗಳು, ಕಂಬಗಳಿಂದ ಕೂಡಿದ ದೊಡ್ಡ ಕೊಠಡಿಗಳು ಅಥವಾ ಹಾಲುಗಳು, ಮಂಟಪಗಳು, ಸ್ಮಾರಕ ನಿರ್ಮಾಣಗಳು, ಜಲ ನಿರ್ಮಾಣಗಳು ಹಾಗೂ ಇತರವುಗಳನ್ನು ಒಳಗೊಂಡಂತೆ ದಕ್ಷಿಣ ಭಾರತದಲ್ಲಿ ಹಿಂದಿನ ಹಿಂದೂ ಸಾಮ್ರಾಜ್ಯದ 1600ಕ್ಕೂ ಹೆಚ್ಚಿನ ಪಳೆಯುಳಿಕೆಗಳನ್ನು ಹೊಂದಿರುವಂತಹ ನಿರಾಡಂಬರ, ಮಹತ್ವಪೂರ್ಣವಾದಂತಹ ನಿವೇಶನ" ಎಂಬುದಾಗಿ ವಿವರಿಸಿರುವುದು.


***ಸ್ಥೂಪಗಳು:*** ಸನ್ನತಿಯಿಂದ ಸುಮಾರು 3 ಕಿ.ಮೀ. ದೂರದಲ್ಲಿರುವ ಕಂಗನಹಳ್ಳಿಯು ಒಂದು ಪ್ರಮುಖ ಬೌದ್ಧರ ಕ್ಷೇತ್ರವಾಗಿರುತ್ತದೆ. ಅಲ್ಲಿ ಒಂದು ಪ್ರಾಚೀನ ಮಹಾಸ್ಥೂಪವನ್ನು ನಿರ್ಮಿಸಲಾಗಿದ್ದಿತು. ಅದು ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನಲ್ಲಿ ಭೀಮಾ ನದಿಯ ಎಡದಂಡೆಯ ಮೇಲಿರುವುದು. ಕನಗನಹಳ್ಳಿಯು ಭಾರತೀಯ ಪುರಾತತ್ವ ಇಲಾಖೆಯ ಸಂಶೋಧನಾ ನಿವೇಶನವಾಗಿರುತ್ತದೆ.

**ಸಾಂಸ್ಥಿಕ ರಚನೆ**

**1.2** 1885ರಲ್ಲಿ ಸ್ಥಾಪಿತವಾದಂತಹ ಪುರಾತತ್ವ ಶಾಸ್ತ್ರ ಮತ್ತು ವಸ್ತು ಸಂಗ್ರಾಹಲಯದ ನಿರ್ದೇಶನಾಲಯವು ಫೆಬ್ರವರಿ 2012ರಲ್ಲಿ ಪುರಾತತ್ವ ಶಾಸ್ತ್ರ, ವಸ್ತುಸಂಗ್ರಹಾಲಯಗಳು ಮತ್ತು ಸ್ಮಾರಕಗಳ ಇಲಾಖೆಯೊಂದಿಗೆ (ಇಲಾಖೆ) ವಿಲೀನ ಗೊಂಡಿತು. ಪ್ರವಾಸೋದ್ಯಮ ಇಲಾಖೆಯ ಆಡಳಿತಾತ್ಮಕ ನಿಯಂತ್ರಣದ ಅಡಿಯಲ್ಲಿರುವಂತಹ ಇಲಾಖೆಯು ರಾಜ್ಯದಲ್ಲಿನ ಪ್ರಾಚೀನ ಸ್ಮಾರಕಗಳು,

ವಸ್ತುಸಂಗ್ರಹಾಲಯಗಳು ಮತ್ತು ಸ್ಮಾರಕಗಳ ರಕ್ಷಣೆ ಮತ್ತು ಸುರಕ್ಷತೆಗೆ ಜವಾಬ್ದಾರಿಯುತವಾಗಿರುತ್ತದೆ. ಈ ಕೆಳಗಿನ ರೇಖಾಚಿತ್ರವು ಇಲಾಖೆಯ ಅಧಿಕಾರ ವ್ಯಾಪ್ತಿಯನ್ನು ತೋರಿಸುತ್ತದೆ.

**ರೇಖಾ ಚಿತ್ರ 1.1: ಪುರಾತತ್ವ ಶಾಸ್ತ್ರ, ವಸ್ತುಸಂಗ್ರಹಾಲಯಗಳು ಮತ್ತು ಸ್ಮಾರಕಗಳ ಇಲಾಖೆಯ ಸಾಂಸ್ಥಿಕ ರಚನೆ**




**ಮೂಲ: ಇಲಾಖೆಯು ಒದಗಿಸಿದ ಮಾಹಿತಿಯಂತೆ**

ಆಡಳಿತಾತ್ಮಕ ಉದ್ದೇಶಗಳಿಗಾಗಿ ರಾಜ್ಯವನ್ನು 4 ವಿಭಾಗಗಳನ್ನಾಗಿ ಅಂದರೆ ಬೆಂಗಳೂರು, ಬೆಳಗಾವಿ, ಕಲಬುರಗಿ ಮತ್ತು ಮೈಸೂರು ಈ ರೀತಿಯಾಗಿ ವಿಭಜಿಸಲಾಗಿರುವುದು. ಪುರಾತತ್ವ ಸಂರಕ್ಷಣಾ ಇಂಜಿನಿಯರುಗಳು (ಎಸಿಇಗಳು) ಹಾಗೂ ಉಪ–ನಿರ್ದೇಶಕರುಗಳು ಪುರಾತತ್ವ ಸ್ಮಾರಕಗಳ ರಕ್ಷಣೆ ಮತ್ತು ಸುರಕ್ಷತೆ ಕಾರ್ಯಾಗಳಲ್ಲಿ ಪುರಾತತ್ವ ಸಂರಕ್ಷಣಾ ಸಹಾಯಕರುಗಳು (ಎಸಿಎಗಳು) ಸಹಾಯಕ ನಿರ್ದೇಶಕರುಗಳು ಮತ್ತು ಪುರಾತತ್ವ ಸಹಾಯಕರುಗಳ (ಎಎಗಳು) ಸಹಾಯದಿಂದ ಹಾಗೂ ಸರ್ಕಾರಿ ವಸ್ತು ಸಂಗ್ರಹಾಲಯಗಳ ನಿರ್ವಹಣೆಯಲ್ಲಿ (ಒಂದು ಕಲಾ ಗ್ಯಾಲರಿಯನ್ನು ಒಳಗೊಂಡಂತೆ) ಸಹಾಯಕ ನಿರ್ದೇಶಕರುಗಳ ಮತ್ತು ಕ್ಯೂರೇಟರುಗಳ ಸಹಾಯದಿಂದ ತಮ್ಮ ಕಾರ್ಯ ನಿರ್ವಹಿಸುವರು.

## ಕಾನೂನಾತ್ಮಕ ಚೌಕಟ್ಟು

**1.3** ಕಲಾತ್ಮಕ ಅಥವಾ ಐತಿಹಾಸಿಕ ಹಿತಾಸಕ್ತಿಗಳನ್ನು ಹೊಂದಿರುವಂತಹ (ರಾಷ್ಟ್ರೀಯ ಪ್ರಾಮುಖ್ಯತೆಯನ್ನು ಹೊಂದಿರುವ) ಪ್ರತಿಯೊಂದು ಸ್ಮಾರಕಗಳು ಅಥವಾ ಸ್ಥಳಗಳು ಅಥವಾ ವಸ್ತುಗಳನ್ನು ಹಾಳು ಮಾಡುವುದು, ಅದರ ಸೌಂದರ್ಯವನ್ನು ವಿರೂಪಗೊಳಿಸುವುದು, ನಾಶಪಡಿಸುವುದು, ತೆಗೆದುಹಾಕುವುದು, ವಿಲೇವಾರಿ ಮಾಡುವುದು ಅಥವಾ ರಫ್ತು ಮಾಡುವುದು ಇವುಗಳಲ್ಲಿ ಯಾವುದು ಅನ್ವಯವೋ ಅವುಗಳಿಂದ ರಕ್ಷಿಸುವುದನ್ನು ಭಾರತದ ಸಂವಿಧಾನದ ಕಲಂ 49 ರಾಜ್ಯದ ಮೇಲೆ ಬದ್ಧತೆಯನ್ನು ವಿಧಿಸಿರುತ್ತದೆ.

ಕರ್ನಾಟಕ ಸರ್ಕಾರವು ರಾಜ್ಯದಲ್ಲಿನ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ನಿವೇಶನಗಳು ಮತ್ತು ಪಳೆಯುಳಿಕೆಗಳ ಸಂರಕ್ಷಣೆಗಾಗಿ ಹಾಗೂ ವಾಸ್ತು ಶಿಲ್ಪಗಳು, ಕೆತ್ತನೆಗಳು ಮತ್ತು ಅಂತಹುದೇ ವಸ್ತುಗಳ ಸಂರಕ್ಷಣೆಗಾಗಿ ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ಮ ನಿವೇಶನಗಳು ಮತ್ತು ಪಳೆಯುಳಿಕೆಗಳು ಅಧಿನಿಯಮ, 1961(ಅಧಿನಿಯಮ) ಹಾಗೂ ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಪುರಾತತ್ಮ ನಿವೇಶನಗಳು ಮತ್ತು ಪಳೆಯುಳಿಕೆಗಳ ನಿಯಮಗಳು 1965 (ನಿಯಮಗಳು) ಇವುಗಳ ಅಧಿಸೂಚನೆ ಹೊರಡಿಸಿತು. ಸರ್ಕಾರವು ಈ ಸಂಪನ್ಮೂಲಗಳನ್ನು ಸ್ವಾಧೀನಪಡಿಸಿಕೊಳ್ಳುವ ಸಲುವಾಗಿ ಹಾಗೂ ಸಂರಕ್ಷಿಸುವ ಸಲುವಾಗಿ ಕರ್ನಾಟಕ ಅತ್ಯಮೂಲ್ಯ ವಸ್ತುಗಳು / ಗುಪ್ತನಿಧಿ ಅಧಿನಿಯಮ, 1962 ಹಾಗೂ ಕರ್ನಾಟಕ ಅತ್ಯಮೂಲ್ಯ ವಸ್ತುಗಳು / ಗುಪ್ತನಿಧಿ ನಿಯಮಗಳು, 1963. ಇವುಗಳ ಅಧಿಸೂಚನೆ ಸಹಾ ಹೊರಡಿಸಿತು. ಮೇಲೆ

ತಿಳಿಸಲಾದಂತಹ ಈ ಅಧಿನಿಯಮಗಳು ಮತ್ತು ನಿಯಮಗಳ ಅಧಿಸೂಚನೆಯ ನಂತರ ಮುಂದಿನ ಪರಿಷ್ಕರಣೆಗಳು ಅಥವಾ ತಿದ್ದುಪಡಿಗಳನ್ನು ಮಾಡಿರುವುದಿಲ್ಲ.

**ಇಲಾಖೆಯ ಕಾರ್ಯಚಟುವಟಿಕೆಗಳು**

**1.4** ಪುರಾತತ್ವ, ಪ್ರಾಚ್ಯ ವಸ್ತುಸಂಗ್ರಾಹಲಯಗಳು ಮತ್ತು ಪರಂಪರೆ ಇಲಾಖೆಯ ಪ್ರಮುಖ ಕಾರ್ಯಚಟುವಟಿಕೆಗಳು ಇನ್ನಿತರವುಗಳ ಜೊತೆಗೆ ಪುರಾತತ್ವ ಸಂಶೋಧನೆ, ಭೂಅಗೆತಗಳು, ಪ್ರಾಚೀನ ಸ್ಮಾರಕಗಳ ಸಂರಕ್ಷಣೆ, ಪ್ರಾಚೀನ ಕಾಲದ ನಾಣ್ಯಗಳ ಅಧ್ಯಯನ, ಶೈಕ್ಷಣಿಕ ಮತ್ತು ಸಂಶೋಧನೆಗಳ ಪುಸ್ತಕಗಳ ಪ್ರಕಟಣೆಗಳು, ವಸ್ತುಸಂಗ್ರಹಾಲಯಗಳ ಅಭಿವೃದ್ಧಿ ಹಾಗೂ ನಿರ್ವಹಣೆ ಹಾಗೂ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಚಟುವಟಿಕೆಗಳನ್ನು ಆಯೋಜಿಸುವುದು ಇತ್ಯಾದಿಗಳಾಗಿರುತ್ತವೆ. ಈ ಕೆಳಗಿನ ಚಟುವಟಿಕೆಗಳು ಇಲಾಖೆಯ ವ್ಯಾಪ್ತಿಯಲ್ಲಿ ಬರುತ್ತವೆ.

ಎ. ಅವುಗಳ ಐತಿಹಾಸಿಕ, ಪುರಾತತ್ವ, ಪರಿಸರೀಯ ಮತ್ತು ಪ್ರಕೃತಿಯ ಮೌಲ್ಯಗಳ ಆಧಾರದ ಮೇರೆಗೆ ಪುರಾತತ್ವ ಕಟ್ಟಡಗಳು ಮತ್ತು ಪ್ರದೇಶಗಳನ್ನು ಗುರುತಿಸುವುದು.

ಬಿ. ಪ್ರಾಚೀನ ಅಥವಾ ಪುರಾತತ್ವ ಸಂರಕ್ಷಣೆಗಳ ಬಗ್ಗೆ ಕಾನೂನಾತ್ಮಕ ಅನುವುಗಳನ್ನು ಪ್ರಸ್ತಾಪಿಸುವುದು.

ಸಿ. ಸಾರ್ವಜನಿಕರು, ಸರ್ಕಾರೇತರ ಸಂಸ್ಥೆಗಳು ಇವುಗಳ ಸಹಯೋಗದೊಂದಿಗೆ ಪುರಾತತ್ವ ಸ್ಮಾರಕಗಳ ಸಂರಕ್ಷಣೆಯ ಕಾರ್ಯಕ್ರಮಗಳನ್ನು ನಡೆಸಿಕೊಂಡು ಹೋಗುವುದು ಹಾಗೂ ಪುರಾತತ್ವ ಸ್ಮಾರಕಗಳ ಪ್ರದೇಶಗಳು ಮತ್ತು ಕಟ್ಟಡಗಳನ್ನು ಗುರುತಿಸುವ ಸಲುವಾಗಿ ಪ್ರಚಾರ ಕಾರ್ಯಗಳನ್ನು ನಡೆಸುವುದು.

ಡಿ. ಪುರಾತತ್ವ ಪ್ರಾಚೀನ ಸ್ಮಾರಕಗಳ ಪ್ರಕಟಣೆಗಳು, ಪ್ರದರ್ಶನಗಳನ್ನು ವ್ಯವಸ್ಥೆ ಮಾಡುವುದು ಹಾಗೂ ಪುರಾತತ್ವ ಸ್ಮಾರಕಗಳ ಸಂರಕ್ಷಣೆಗಳ ಮೇಲೆ ಕೈಪಿಡಿಗಳನ್ನು ಹೊರತರುವುದು ಹಾಗೂ ಸಾಕ್ಷಾಚಿತ್ರಗಳನ್ನು ತೆಗೆಯುವುದು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ವ್ಯವಸ್ಥೆ ಮಾಡುವುದು.

ಇ. ಯುನೆಸ್ಕೋ, ಇಂಟ್ಯಾಕ್, ಭಾರತ ಸರ್ಕಾರ, ರಾಜ್ಯ ಸರ್ಕಾರ ಹಾಗೂ ಇತರೆ ಖಾಸಗಿ ಸಂಸ್ಥೆಗಳ ಸಹಯೋಗದೊಂದಿಗೆ ಪಾರಂಪರಿಕ ನಿಧಿಯನ್ನು ಸ್ಥಾಪಿಸುವುದು ಹಾಗೂ

ಎಫ್. ಜಿಐಎಸ್, ರಿಮೋಟ್ ಸೆನ್ಸಿಂಗ್ ಮತ್ತು ಸರ್ವೆ ಮೂಲಕ ಪ್ರಾಚೀನ ಪುರಾತತ್ವ ಸ್ಮಾರಕಗಳನ್ನು ಒಳಗೊಂಡಿರುವಂತಹ ಪ್ರದೇಶಗಳ ನಕಾಶೆಗಳನ್ನು ತಯಾರಿಸುವುದು.

ಅಲ್ಲದೆಯೇ ಇಲಾಖೆಯು ಮಾರ್ಚ್ 2004ರಿಂದಲೂ ಅವುಗಳ ಐತಿಹಾಸಿಕ ಹಿನ್ನೆಲೆಯ ಕಾರಣ ಆರು ಪುರಾತತ್ವ ಪ್ರದೇಶಗಳಲ್ಲಿ[1] ಪುರಾತತ್ವ ಸ್ಮಾರಕಗಳ ಕಟ್ಟಡಗಳಿಗೆ ಸಂಬಂಧಿಸಿದಂತೆ ಸಂರಕ್ಷಣೆ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ನಡೆಸಿಕೊಂಡು ಹೋಗುತ್ತಿರುವುದು. ಡಿಸೆಂಬರ್ 2012ರಲ್ಲಿ ಇನ್ನೂ 14 ಹೆಚ್ಚಿನ ಪ್ರದೇಶಗಳನ್ನು[2] ಪುರಾತತ್ವ ಸ್ಮಾರಕಗಳ ಪ್ರದೇಶಗಳು ಎಂಬುದಾಗಿ ಘೋಷಿಸಲಾಯಿತು ಹಾಗೂ ಇಲಾಖೆಯ ಆಡಳಿತ ವ್ಯಾಪ್ತಿಯ ಒಳಗಡೆಗೆ ತರಲಾಯಿತು. ಅಲ್ಲದೆಯೇ ಇಲಾಖೆಯು ಕೆಲವು ಪ್ರಾಚೀನ ಸ್ಮಾರಕಗಳ ಸಂರಕ್ಷಣೆ ಕಾರ್ಯವನ್ನು ಸಂಬಂಧಿಸಿದಂತೆ ವಿವಿಧ ಸಂಸ್ಥೆಗಳು, ಟ್ರಸ್ಟುಗಳು ಇತ್ಯಾದಿಗಳಿಂದ ಸ್ವೀಕರಿಸಲಾಗುವ ಪ್ರಸ್ತಾವನೆಗಳ ತಕ್ಕುದಾದ ರೀತಿಯ ಪರಿಗಣನೆಯ ನಂತರ ಸಾರ್ವಜನಿಕ ಖಾಸಗಿ ಪಾಲುದಾರಿಕೆಗಳು ಅಥವಾ ಸಹಭಾಗಿತ್ವಗಳ ಮೂಲಕ ನಡೆಸಿಕೊಂಡು ಹೋಗುವುದು.

---

[1] ಮೈಸೂರು, ಶ್ರೀರಂಗಪಟ್ಟಣ, ಕಲಬುರಗಿ, ಬೀದರ್, ಬಿಜಾಪುರ ಮತ್ತು ಕಿತ್ತೂರು.

[2] ಸನ್ನತಿ, ನಗವಿ, ಕಮಟಗಿ, ಬದಾಮಿ, ಐಹೊಳೆ, ಬೆಂಗಳೂರು, ಲಕ್ಕುಂಡಿ, ಬನವಾಸಿ, ತಲಕಾಡು, ಬೆಳ್ಳಿಗಾವಿ, ಬೇಲೂರು, ಹಳೇಬೀಡು, ಮಳಖೇಡ ಮತ್ತು ಮೇಲುಕೋಟೆ.



**ಛಾಯಾಚಿತ್ರ ಸಂಖ್ಯೆ 1.2: ಹಾಸನ ಜಿಲ್ಲೆಯಲ್ಲಿ ಹೊಯ್ಸಳರು ನಿರ್ಮಿಸಿರುವಂತಹ ಹಳೇಬೀಡು ದೇವಸ್ಥಾನ.**

## ರಾಜ್ಯವು ಸಂರಕ್ಷಿಸಿರುವಂತಹ ಐತಿಹಾಸಿಕ ಪುರಾತತ್ವ ಸ್ಮಾರಕಗಳು ಮತ್ತು ಪ್ರಾಚೀನ ಅವಶೇಷಗಳು

**1.5** ಇಲಾಖೆಯು ಪ್ರಕಟಿಸಿರುವಂತಹ ಸಂರಕ್ಷಿತ ಪ್ರಾಚೀನ ಸ್ಮಾರಕಗಳ ನಿರ್ದೇಶಿಕೆ ಅಥವಾ ಡೈರೆಕ್ಟರಿಯ ಅನುಸಾರ ರಾಜ್ಯದಲ್ಲಿ 1,453 ಸಂರಕ್ಷಿತ ಪ್ರಾಚೀನ ಸ್ಮಾರಕಗಳು ಇರುತ್ತವೆ. ಅವುಗಳ ಪೈಕಿ 844 ರಾಜ್ಯ ಸರ್ಕಾರದ ಸಂರಕ್ಷಿತ ಪ್ರಾಚೀನ ಸ್ಮಾರಕಗಳಾಗಿರುತ್ತವೆ ಹಾಗೂ 609 ಭಾರತೀಯ ಪುರಾತತ್ವ ಸರ್ವೇಕ್ಷಣ ಸಂಸ್ಥೆಯಿಂದ (ಎಎಸ್ಐ) ಸಂರಕ್ಷಿಸಲ್ಪಟ್ಟಿರುತ್ತವೆ.

**ಕೋಷ್ಟಕ ಸಂಖ್ಯೆ 1.1: ವರ್ಗೀಕೃತ ಪ್ರಾಚೀನ ಸ್ಮಾರಕಗಳ ಮಾದರಿಯನ್ನು ತೋರಿಸುವ ತ:ಖ್ತೆ**

(ಸಂಖ್ಯೆಗಳಲ್ಲಿ)

| ಕ್ರಮ ಸಂಖ್ಯೆ | ಸ್ಮಾರಕಗಳ ಮಾದರಿಗಳು | ರಾಜ್ಯ ಸಂರಕ್ಷಿತ | ಎ.ಎಸ್.ಐ ಸಂರಕ್ಷಿತ | ಒಟ್ಟಾರೆ ಸ್ಮಾರಕಗಳು |
|---|---|---|---|---|
| 1 | ದೇವಸ್ಥಾನಗಳು | 497 | 291 | 788 |
| 2 | ಮಸೀದಿಗಳು /ದರ್ಗಾಗಳು / ಇತ್ಯಾದಿಗಳು | 47 | 75 | 122 |
| 3 | ಪುರಾತತ್ವ ಸ್ಮಾರಕಗಳ ನಿವೇಶನಗಳು | 97 | 22 | 119 |
| 4 | ಕೋಟೆಗಳು | 48 | 17 | 65 |
| 5 | ಅರಮನೆಗಳು | 7 | 2 | 9 |
| 6 | ಪುರಾತತ್ವ ಸ್ಮಾರಕ ಕಟ್ಟಡಗಳು | 8 | 1 | 9 |
| 7 | ಇತರವುಗಳು | 140 | 201 | 341 |
| | ಒಟ್ಟು | **844 (58%)** | **609 (42%)** | **1,453** |

ಅಲ್ಲದೆಯೇ ಇಲಾಖೆಯು ಅತ್ಯಮುಲ್ಯವಾದಂತಹ ಪ್ರಾಚೀನ ಅವಶೇಷಗಳನ್ನು ಅವೆಂದರೆ ಪ್ರಾಚೀನ ಶಿಲ್ಪಕೃತಿಗಳು, ಶಿಲಾಶಾಸನಗಳು, ನಾಣ್ಯಗಳು, ತಾಮ್ರದ ಪ್ಲೇಟುಗಳು ಇತ್ಯಾದಿಗಳನ್ನು ರಾಜ್ಯದ ಉದ್ದಗಲಕ್ಕೂ ಇರುವಂತಹ 17 ಇಲಾಖಾ ವಸ್ತುಸಂಗ್ರಹಾಲಯಗಳಲ್ಲಿ[3] ಸಂರಕ್ಷಿಸಿರುವುದು.

## ಲೆಕ್ಕಪರಿಶೋಧನೆಯ ಉದ್ದೇಶಗಳು

**1.6** ಈ ಕೆಳಗಿನ ಅಂಶಗಳನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಕಾರ್ಯನಿರ್ವಹಣ ಲೆಕ್ಕಪರಿಶೋಧನೆಯನ್ನು ಕೈಗೆತ್ತಿಕೊಳ್ಳಲಾಯಿತು.

[3] ಬೆಂಗಳೂರಿನಲ್ಲಿ ಎರಡು ಹಾಗೂ ರಾಯಚೂರು, ಕಲಬುರಗಿ, ಶಿವಮೊಗ್ಗ, ಚಿತ್ರದುರ್ಗ, ಹೂವಿನಹಡಗಲಿ, ಮಡಿಕೇರಿ, ಹಾಸನ, ಬಸವಕಲ್ಯಾಣ, ಅಥಣಿ, ಗದಗ, ಮೈಸೂರು, ಶ್ರೀರಂಗಪಟ್ಟಣ, ಯಳಂದೂರು, ಕಿತ್ತೂರು ಮತ್ತು ಮಂಗಳೂರು, ಈ ಸ್ಥಳಗಳಲ್ಲಿ ತಲಾ ಒಂದು.

i. ರಾಜ್ಯ ಸಂರಕ್ಷಿತ ಪ್ರಾಚೀನ ಸ್ಮಾರಕಗಳು ಮತ್ತು ಪ್ರಾಚೀನ ಅವಶೇಷಗಳನ್ನು ಗುರುತಿಸುವುದು, ರಕ್ಷಿಸುವುದು ಮತ್ತು ಸಂರಕ್ಷಣೆ ಮಾಡಿರುವುದು ಇವುಗಳ ದಕ್ಷತೆ ಮತ್ತು ಪರಿಣಾಮಕಾರಿತ್ವ

ii. ರಾಜ್ಯದಲ್ಲಿನ ವಸ್ತುಸಂಗ್ರಹಾಲಯಗಳ ಕಾರ್ಯನಿರ್ವಹಣೆಯ ದಕ್ಷತೆ ಹಾಗೂ ಪ್ರಾಚೀನ ಸ್ಮಾರಕಗಳು ಮತ್ತು ಪ್ರಾಚೀನ ಅವಶೇಷಗಳ ರಕ್ಷಣೆ ಮತ್ತು ಸುರಕ್ಷತೆಯ ಪ್ರಯತ್ನಗಳ ಸಮರ್ಪಕತೆ

## ಲೆಕ್ಕಪರಿಶೋಧನೆಯ ಮಾನದಂಡ

**1.7** ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗಾಗಿ ಲೆಕ್ಕಪರಿಶೋಧನೆಯ ಮಾನದಂಡದ ಪ್ರಮುಖ ಮೂಲಗಳು ಈ ಕೆಳಗಿನಂತಿದ್ದವು.

- ಕರ್ನಾಟಕ ಪ್ರಾಚೀನ ' ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ನಿವೇಶನಗಳು ಮತ್ತು ಪಳೆಯುಳಿಕೆಗಳ ಅಧಿನಿಯಮ 1961 ಮತ್ತು ನಿಯಮಗಳು 1965

- ಕರ್ನಾಟಕ ಅತ್ಯಮೂಲ್ಯ ವಸ್ತುಗಳು / ಗುಪ್ತನಿಧಿ ಅಧಿನಿಯಮ, 1962 ಹಾಗೂ ನಿಯಮಗಳು, 1963.

- ಪ್ರಾಚೀನ ಸ್ಮಾರಕಗಳು, ಪುರಾತತ್ವ ನಿವೇಶನಗಳು ಮತ್ತು ಪಳೆಯುಳಿಕೆಗಳ ಸಂರಕ್ಷಣೆಗಾಗಿ ರಾಷ್ಟ್ರೀಯ ಕಾರ್ಯನೀತಿ 2014;

- ಪುರಾತತ್ವಶಾಸ್ತ್ರ, ವಸ್ತು ಸಂಗ್ರಾಹಲಯಗಳು ಮತ್ತು ಸ್ಮಾರಕಗಳ ಇಲಾಖೆಯ ವಾರ್ಷಿಕ ಕ್ರಿಯಾ ಯೋಜನೆ ಮತ್ತು ವಾರ್ಷಿಕ ವರದಿ, ವಲಯ ನಿಯಂತ್ರಣಗಳು (ತಿದ್ದುಪಡಿ) 2020;

- ಕರ್ನಾಟಕ ಹಣಕಾಸು ಸಂಹಿತೆ ಮತ್ತು ಕರ್ನಾಟಕ ಆಯವ್ಯಯ ಕೈಪಿಡಿ;

- ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ಹಾಗೂ ನಿಯಮಗಳು, 2000, ಲೋಕೋಪಯೋಗಿ ಇಲಾಖೆ ಕೈಪಿಡಿಗಳು / ಸುತ್ತೋಲೆಗಳು;

- ರಾಜ್ಯ ಸರ್ಕಾರ /ಕೇಂದ್ರ ಸರ್ಕಾರ/ಭಾರತೀಯ ಪುರಾತತ್ವ ಸಂಶೋಧನಾ ಸಂಸ್ಥೆಯು ಕಾಲಾನುಕಾಲಕ್ಕೆ ನೀಡಿರುವಂತಹ ಆದೇಶಗಳು/ ಅಧಿಸೂಚನೆಗಳು/ ಸುತ್ತೋಲೆಗಳು / ನಿರ್ದೇಶನಗಳು/ ಮಾರ್ಗಸೂಚಿಗಳು/ ಕೈಪಿಡಿಗಳು.

## ಲೆಕ್ಕಪರಿಶೋಧನೆಯ ವ್ಯಾಪ್ತಿ ಮತ್ತು ವಿಧಾನ

**1.8** ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯು 2017–18ರಿಂದ 2021–22ರ ಅವಧಿಯನ್ನು ವ್ಯಾಪಿಸಿರುತ್ತದೆ. ರಾಜ್ಯದಲ್ಲಿ ಗುರುತಿಸಲಾಗಿರುವಂತಹ 1,453 ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ನಿವೇಶನಗಳ ಪೈಕಿ 609 ಸ್ಮಾರಕಗಳನ್ನು ಭಾರತ ಸರ್ಕಾರವು ಭಾರತೀಯ ಪುರಾತತ್ವ ಸಂಶೋಧನ ಸಂಸ್ಥೆಯ ಮೂಲಕ ಸಂರಕ್ಷಿಸುತ್ತಿದ್ದು ಅವುಗಳನ್ನು ಲೆಕ್ಕಪರಿಶೋಧನೆಯ ವ್ಯಾಪ್ತಿಯಿಂದ ಹೊರಗಿಡಲಾಗಿರುತ್ತದೆ. ಈ ರೀತಿಯಾಗಿ ಕರ್ನಾಟಕ ಸರ್ಕಾರದ ಅಡಿಯಲ್ಲಿ ಸಂರಕ್ಷಿತ 844 ರಾಜ್ಯ ಪ್ರಾಚೀನ ಸ್ಮಾರಕಗಳನ್ನು ಮಾದರಿಯ ಆಯ್ಕೆಗೆ ಪರಿಗಣಿಸಲಾಗಿದ್ದಿತು. ಸರಳ ಯಾದೃಚ್ಛಿಕ ಮಾದರಿ ಆಯ್ಕೆಯನ್ನು ಉಪಯೋಗಿಸುವ ಮೂಲಕ ಲೆಕ್ಕಪರಿಶೋಧನಾ ಮಾದರಿಯನ್ನು ರೂಪಿಸಲಾಯಿತು. ಹಾಗೂ ಆಯ್ಕೆ ಮಾಡಲಾದಂತಹ ಮಾದರಿಯ ವಿವರಗಳನ್ನು ***ಅನುಬಂಧ-1ರಲ್ಲಿ*** ನೀಡಲಾಗಿರುವುದು. ಈ ಕೆಳಗಿನ ಕೋಷ್ಟಕವು ಅಳವಡಿಸಿಕೊಳ್ಳಲಾಗಿರುವ ಮಾದರಿ ವಿಧಾನವನ್ನು ತೋರಿಸುತ್ತದೆ.

**ಕೋಷ್ಟಕ ಸಂಖ್ಯೆ 1.2: ಅಳವಡಿಸಿಕೊಳ್ಳಲಾಗಿರುವಂತಹ ಮಾದರಿ ವಿಧಾನ**

| ಕ್ರಮ ಸಂಖ್ಯೆ | ಪ್ರವರ್ಗ | ಮಾದರಿ ಗಾತ್ರ |
|---|---|---|
| 1 | ಜಿಲ್ಲೆ | 29 ಜಿಲ್ಲೆಗಳ[4] ಪೈಕಿ 8ನ್ನು ಅಂದರೆ ಜಿಲ್ಲೆಗಳ *ಶೇಕಡ* 25ರಷ್ಟನ್ನು (ಬೆಂಗಳೂರು, ಬೆಳಗಾವಿ, ಕಲಬುರಗಿ ಮತ್ತು ಮೈಸೂರು ವಿಭಾಗಗಳಲ್ಲಿ ಪ್ರತಿಯೊಂದರಲ್ಲೂ 2). |
| 2 | ಸ್ಮಾರಕಗಳು | 8 ಜಿಲ್ಲೆಗಳಲ್ಲಿ 356 ರಾಜ್ಯ ಸಂರಕ್ಷಿತ ಸ್ಮಾರಕಗಳ ಪೈಕಿ 94 ಅಂದರೆ ಒಟ್ಟಾರೆ ಸ್ಮಾರಕಗಳ *ಶೇಕಡ* 11.14 |
| 3 | ವಸ್ತುಸಂಗ್ರಹಾಲಯಗಳು | ಆಯ್ಕೆ ಮಾಡಲಾದ ಜಿಲ್ಲೆಗಳಲ್ಲಿ ಎಲ್ಲಾ 8 ವಸ್ತುಸಂಗ್ರಹಾಲಯಗಳು ಅಂದರೆ ಒಟ್ಟಾರೆ ವಸ್ತು ಸಂಗ್ರಹಾಲಯಗಳ ಶೇಕಡ 50 |
| 4 | ಕಾಮಗಾರಿಗಳು | ವೆಚ್ಚದ ಆಧಾರದ ಮೇರೆಗೆ ಆಯ್ದ ಜಿಲ್ಲೆಗಳಲ್ಲಿ ಕಾರ್ಯಗತಗೊಳಿಸಲಾಗಿದ್ದ 154 ಸಂರಕ್ಷಣಾ ಕಾಮಗಾರಿಗಳ ಪೈಕಿ (ಸ್ಮಾರಕಗಳು) 23 ಹಾಗೂ 46ರ ಪೈಕಿ 22 ಸಂರಕ್ಷಣಾ ಕಾಮಗಾರಿಗಳನ್ನು (ವಸ್ತುಸಂಗ್ರಹಾಲಯಗಳು ) ಆಯ್ಕೆ ಮಾಡಲಾಯಿತು. |

ಲೆಕ್ಕಪರಿಶೋಧನೆಯು ಕರ್ನಾಟಕ ಸರ್ಕಾರದ ಪ್ರವಾಸೋದ್ಯಮ ಇಲಾಖೆ, ಆಯುಕ್ತರವರ ಕಚೇರಿ ನಿರ್ದೇಶಕರುಗಳು/ ಉಪ–ನಿರ್ದೇಶಕರುಗಳು /ಸಹಾಯಕ ನಿರ್ದೇಶಕರುಗಳು, ರಕ್ಷಣೆ ಮತ್ತು ಸಂರಕ್ಷಣೆಯಲ್ಲಿ ತೊಡಗಿಸಿಕೊಂಡಿರುವ ಪುರಾತತ್ವ ಸ್ಮಾರಕಗಳ ಸಂರಕ್ಷಣಾ ಇಂಜಿನಿಯರುಗಳು ಹಾಗೂ ಕ್ಯೂರೇಟರುಗಳ ಕಚೇರಿಗಳಲ್ಲಿ ನಿರ್ವಹಿಸಿದ್ದಂತಹ ದಾಖಲೆಗಳನ್ನು ಪರಿಶೀಲಿಸಿತು.) ಲೆಕ್ಕಪರಿಶೋಧನಾ ವಿಧಾನವು 94 ಪ್ರಾಚೀನ ಸ್ಮಾರಕಗಳು ಮತ್ತು 8 ವಸ್ತು ಸಂಗ್ರಹಾಲಯಗಳನ್ನು ಇಲಾಖಾ ಅಧಿಕಾರಿಗಳು/ಸಿಬ್ಬಂದಿಗಳೊಂದಿಗೆ ಜಂಟಿ ಭೌತಿಕ ಪರಿಶೀಲನೆ ಮಾಡುವುದನ್ನು ಒಳಗೊಂಡಿದ್ದಿತು.

ಪ್ರವೇಶ ಮಟ್ಟದ ಸಭೆಯನ್ನು ಮೇ 2022ರಲ್ಲಿ ನಡೆಸಲಾಯಿತು, ಆ ಸಭೆಯಲ್ಲಿ ಲೆಕ್ಕಪರಿಶೋಧನೆಯ ಉದ್ದೇಶಗಳು, ಮಾನದಂಡ, ವ್ಯಾಪ್ತಿ ಹಾಗೂ ಮಾದರಿ ಆಯ್ಕೆ ವಿಧಾನಗಳನ್ನು ಕರ್ನಾಟಕ ಸರ್ಕಾರದೊಂದಿಗೆ ಚರ್ಚಿಸಲಾಯಿತು. ಕರಡು ಕಾರ್ಯನಿರ್ವಹಣಾ ಲೆಕ್ಕಪರಿಶೋಧನಾ ವರದಿಯನ್ನು ಸರ್ಕಾರ / ಇಲಾಖೆಗೆ ಜೂನ್ 2023ರಲ್ಲಿ ನೀಡಲಾಗಿದ್ದಿತು. ಹಾಗೂ ಅದನ್ನು ಜುಲೈ 2023ರಲ್ಲಿ ನಡೆದಂತಹ ನಿರ್ಗಮನ ಮಟ್ಟದ ಸಭೆಯಲ್ಲಿ ಚರ್ಚಿಸಲಾಯಿತು. ಸರ್ಕಾರವು ಲೆಕ್ಕಪರಿಶೋಧನೆಯ ಎಲ್ಲಾ ಶಿಫಾರಸ್ಸುಗಳನ್ನು ಒಪ್ಪಿಕೊಂಡಿತು (ಆಗಸ್ಟ್ 2023) ಹಾಗೂ ಉತ್ತರಗಳನ್ನು ವರದಿಯಲ್ಲಿ ಸೂಕ್ತವಾಗಿ ಅಳವಡಿಸಿಕೊಳ್ಳಲಾಗಿರುವುದು.

## ಲೆಕ್ಕಪರಿಶೋಧನೆಯಲ್ಲಿ ಎದುರಿಸಲಾದಂತಹ ಅಡಚಣೆಗಳು

**1.9** ಪುನಃ ಪುನಃ ಮಾಡಲಾದ ಕೋರಿಕೆಗಳ ಹೊರತಾಗಿಯು ಈ ಕೆಳಗಿನ ದಾಖಲೆಗಳು ಮತ್ತು ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಒದಗಿಸಲಿಲ್ಲ:

- ಆಯವ್ಯಯ ಹಂಚಿಕೆಯನ್ನು (ಅಂದಾಜುಗಳು) ಕೋರಿ ಆಡಳಿತ/ ಹಣಕಾಸು ಇಲಾಖೆಯೊಂದಿಗೆ ಮಾಡಲಾಗಿರುವ ಪತ್ರ ವ್ಯವಹಾರಗಳು, ಕ್ರಿಯಾ ಯೋಜನೆಗಳ ಸಲ್ಲಿಕೆ ಮತ್ತು ಅನುಮೋದನೆ;
- ನಿವೇಶನ, ಪುರಾತತ್ವ ಸ್ಮಾರಕಗಳ ಸಂರಕ್ಷಣಾ ಸಮಿತಿಯ ಶಿಫಾರಸ್ಸುಗಳು ಮುಂತಾದ ವಿವರಗಳನ್ನು ಒಳಗೊಂಡಂತೆ ಸಂರಕ್ಷಿತ ಮತ್ತು ಸಂರಕ್ಷಿತವಲ್ಲದ ಪುರಾತತ್ವ ಸ್ಮಾರಕಗಳ ರಿಜಿಸ್ಟರು ಅಥವಾ ದಾಖಲೆ (ಇನ್‌ವೆಂಟರಿ);

[4] ಬೆಂಗಳೂರು ಗ್ರಾಮಾಂತರ ಜಿಲ್ಲೆ (ಬೆಂಗಳೂರು ನಗರ ಜಿಲ್ಲೆಯೊಂದಿಗೆ ಗುರುತಿಸಲಾಗಿರುವುದು) ಹಾಗೂ ವಿಜಯನಗರ ಜಿಲ್ಲೆಯನ್ನು (ಅವಿಭಾಜಿತ ಬಳ್ಳಾರಿ ಜಿಲ್ಲೆಯೊಂದಿಗೆ ಗುರುತಿಸಲಾಗಿರುವುದು) ಹೊರತುಪಡಿಸಿದಂತೆ.

- 2017–22ರ ಅವಧಿಯಲ್ಲಿ ಅಧಿಸೂಚನೆ ಹೊರಡಿಸಲಾಗಿರುವ ಪುರಾತತ್ವ ಸ್ಮಾರಕಗಳ ಪಟ್ಟಿ, ಅಧಿಸೂಚನೆಗಳ ಪ್ರತಿಯೊಂದಿಗೆ ಹಾಗೂ ಅಧಿಸೂಚನೆಯನ್ನು ಇನ್ನೂ ಹೊರಡಿಸಬೇಕಿರುವ ಪುರಾತತ್ವ ಸ್ಮಾರಕಗಳ ಪಟ್ಟಿ;

- ವಸ್ತು ಸಂಗ್ರಹಾಲಯಗಳಿಗೆ ಸಂಬಂಧಿಸಿದಂತೆ ಕಾಮಗಾರಿ ಕಡತಗಳು ಮತ್ತು ಇ–ದಾಖಲೆ ಕಾಮಗಾರಿಗಳು.

ಈ ದಾಖಲೆಗಳು /ಮಾಹಿತಿಯ ಅನುಪಸ್ಥಿತಿಯಲ್ಲಿ ಆಯವ್ಯಯ / ಹಣಕಾಸು ಹಂಚಿಕೆ ಪ್ರಕ್ರಿಯೆಗಳ ಮೇಲೆ ಹಾಗೂ ಪುರಾತತ್ವ ಸ್ಮಾರಕಗಳು ಮತ್ತು ವಸ್ತುಸಂಗ್ರಹಾಲಯಗಳ ರಕ್ಷಣೆ ಮತ್ತು ಸುರಕ್ಷತೆಯ ವಿಷಯಗಳ ಮೇಲೆ ಲೆಕ್ಕಪರಿಶೋಧನೆಯು ಒಂದು ಸಮಗ್ರವಾದಂತಹ ರೀತಿಯಲ್ಲಿ ಟೀಕೆ ಟಿಪ್ಪಣಿ ಮಾಡಲು ಸಾದ್ಯವಾಗಲಿಲ್ಲ.

## ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದಂತಹ ಅಂಶಗಳು

**1.10** ಈ ವರದಿಯು 5 ಅದ್ಯಾಯಗಳನ್ನು ಒಳಗೊಂಡಿರುವುದು ಹಾಗೂ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುವಂತಹ ಅಂಶಗಳನ್ನು ಈ ಕೆಳಗಿನ ಅಧ್ಯಾಯಗಳಲ್ಲಿ ರೂಪಿಸಲಾಗಿರುವುದು, ಅವುಗಳೆಂದರೆ

- **ಅದ್ಯಾಯ – II**: ಪೂರ್ವಭಾವಿಯಾಗಿ ಯೋಜಿಸುವುದು ಹಾಗೂ ಹಣಕಾಸಿನ ನಿರ್ವಹಣೆ
- **ಅದ್ಯಾಯ – III**: ಪುರಾತತ್ವ ಸ್ಮಾರಕಗಳ ಗುರುತಿಸುವಿಕೆ ಮತ್ತು ನಿರ್ಧಾರಣೆ.
- **ಅದ್ಯಾಯ – IV**: ಪುರಾತತ್ವ ಸ್ಮಾರಕಗಳ ರಕ್ಷಣೆ ಮತ್ತು ಸಂರಕ್ಷಣೆ.
- **ಅದ್ಯಾಯ – V**: ವಸ್ತು ಸಂಗ್ರಹಾಲಯಗಳ ಕಾರ್ಯನಿರ್ವಹಣೆ.

## ಕೃತಜ್ಞತೆ

**1.11** ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ನಡೆಸುವುದಕ್ಕಾಗಿ ಅನುಕೂಲ ಕಲ್ಪಿಸುವ ಸಲುವಾಗಿ ಪ್ರವಾಸೋದ್ಯಮ ಇಲಾಖೆ, ಕರ್ನಾಟಕ ಸರ್ಕಾರ, ಪುರಾತತ್ವ, ಪ್ರಾಚ್ಯ ವಸ್ತುಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ. ಇವುಗಳು ನೀಡಿದಂತಹ ಸಹಕಾರ ಮತ್ತು ಸಹಾಯಕ್ಕಾಗಿ ಲೆಕ್ಕಪರಿಶೋಧನೆಯು ಈ ಮೂಲಕ ಕೃತಜ್ಞತೆಯನ್ನು ಸಲ್ಲಿಸುತ್ತಿರುವುದು.